ಸಿ.ಸಿ. ನಂ. 548/2017 ಪಿ.ಡಬ್ಲೂ-1

ದಿನಾಂಕಃ 05-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ನನ್ನ ಮಾವ ಮೋಹನ ರವರ ಬಳಿ ಬಾಡಿಗೆ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ದಿನಕ್ಕೆ ರೂ.250/- ಕೂಲಿ ಸಿಗುತ್ತದೆ ಎಂದರೆ ಸರಿಯಲ್ಲ. ನನಗೆ ಕಾರಪೇಂಟರ್ ಕೆಲಸದಿಂದ ಪ್ರತಿ ತಿಂಗಳು ರೂ. 25,000/- ಆದಾಯ ಬರುತ್ತದೆ. ನಾನು ಆರೋಪಿಗೆ ದಿನಾಂಕ 10.04.2014 ರಂದು ರೂ. 3,00,000/- ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ. ನಾನು ಆರೋಪಿಗೆ ಹಣ ನೀಡುವಾಗ ಮೋಹನ ಎಂಬುವವರು ಇದ್ದರು. ಮೋಹನ ರವರನ್ನು ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ. ನನ್ನ ಬಳಿ ರೂ. 3,00,000/- ಹಣ ಇರಲಿಲ್ಲ ಎಂದರೆ ಸರಿಯಲ್ಲ.

2) ನಮ್ಮ ಕುಟುಂಬಕ್ಕೆ 3 ಎಕರೆ ವ್ಯವಹಾರ ಜಮೀನು ಇರುತ್ತದೆ. ಅದು ಒಟ್ಟು ಕುಟುಂಬದ ಜಮೀನು ಆಗಿರುತ್ತದೆ. ನನ್ನ ತಂದೆಗೆ ಮೂರು ಜನ ಮಕ್ಕಳು. ಸದರಿ ಆಸ್ತಿ ಇದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಜಮೀನಿನಲ್ಲಿ ಭತ್ತ ಮತ್ತು ರಾಗಿ ಬೆಳೆಯುತ್ತೇವೆ. ಸದರಿ ಜಮೀನಿನಿಂದ ವಾರ್ಷಿಕವಾಗಿ ರೂ. 1,00,000/- ರಿಂದ 1,50,000/- ಆದಾಯ ಬರುತ್ತದೆ. ಸದರಿ ಜಮೀನನ್ನು ನಾವೇ ಮಾಡುತ್ತಿದ್ದೇವೆ. ಒಟ್ಟು ಕುಟುಂಬದ ಜಮೀನನ್ನು ನಮಗೆ ಬಿಟ್ಟುಕೊಟ್ಟಿರುವ ಬಗ್ಗೆ ದಾಖಲೆ ಇರುವುದಿಲ್ಲ. ವ್ಯವಹಾರದಿಂದ ವಾರ್ಷಿಕ ವರಮಾನ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2014 ರಲ್ಲಿ ನನಗೆ ಎಷ್ಟು ಆದಾಯ ಇತ್ತು ಎಂದು ತೋರಿಸಲು ಆದಾಯ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ. ನಾನು

ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಾನು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ